ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-04/ಅ.ಕಾ.ನಿ/2016-17

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ. 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ:17 -08-2016.

## ಜ್ಞಾಪನ

ವಿಷಯ:10ನೇ ಕರ್ನಾಟಕ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಒಓಡಿ ಸೌಲಭ್ಯ ನೀಡುವ ಕುರಿತು.

ಉಲ್ಲೇಖ: ಡಾ. ಕೆ. ಕಾಳಚನ್ನೇಗೌಡ, ಸಂಘಟನಾ ಕಾರ್ಯದರ್ಶಿ, 10ನೇ ಕರ್ನಾಟಕ ಸಮಾಜಶಾಸ್ತ್ರ ಸಮ್ಮೇಳನ, ಮಹಾರಾಜ ಕಾಲೇಜು, ಮೈಸೂರು-570005.

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಡಾ. ಕೆ. ಕಾಳಚನ್ನೇಗೌಡ, ಸಂಘಟನಾ ಕಾರ್ಯದರ್ಶಿ, 10ನೇ ಕರ್ನಾಟಕ ಸಮಾಜಶಾಸ್ತ್ರ ಸಮ್ಮೇಳನ, ಮಹಾರಾಜ ಕಾಲೇಜು, ಮೈಸೂರು-570005 ಇವರು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಆಗಸ್ಟ್ 17, 18 ಮತ್ತು 19 2016ರಂದು 10ನೇ ಕರ್ನಾಟಕ ಸಮಾಜಶಾಸ್ತ್ರ ಸಮ್ಮೇಳನವನ್ನು ಏರ್ಪಡಿಸಿರುತ್ತಾರೆ ಸಮ್ಮೇಳನದ ಮುಖ್ಯ ವಿಷಯ "ಕರ್ನಾಟಕದಲ್ಲಿನ ಅಭಿವೃದ್ಧಿ, ಪ್ರಭುತ್ವ ಮತ್ತು ಪರಿಸರ ಸಮಸ್ಯೆಗಳು, ಸಂಘರ್ಷ ಹಾಗೂ ಕಾಳಜಿ"ಯಾಗಿದೆ. ಆದ್ದರಿಂದ ರಾಜ್ಯದ ಸರ್ಕಾರಿ, ಅನುದಾನ ಪಡೆಯುತ್ತಿರುವ ಮತ್ತು ಅನುದಾನ ರಹಿತ ಕಾಲೇಜುಗಳ ಸಮಾಜಶಾಸ್ತ್ರ ಉಪನ್ಯಾಸಕರು ಹಾಗೂ ಈ ವಿಷಯದಲ್ಲಿ ಆಸಕ್ತರಾಗಿರುವ ಇತರೆ ಅಂತರ್ ಶಿಸ್ತೀಯ ಉಪನ್ಯಾಸಕರುಗಳಿಗೆ ಈ ಮೇಲೆ ತಿಳಿಸಿದ ದಿನಾಂಕಗಳಂದು ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಒಓಡಿ ಸೌಲಭ್ಯವನ್ನು ನೀಡಲಾಗಿದೆ.

ಈ ಉಪನ್ಯಾಸಕರುಗಳು ಕಾರ್ಯಾಗಾರದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನಷ್ಟವಾಗುವ ತರಗತಿಗಳನ್ನು ವಿಶೇಷ ತರಗತಿ ತೆಗೆದುಕೊಂಡು ಸರಿದೂಗಿಸಲು ಸೂಚಿಸಿದೆ.

ಇವರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಯಾವುದೇ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.

ಜಂಟಿನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಸಂಬಂಧಪಟ್ಟ ಪ್ರಾಂಶುಪಾಲರಿಗೆ- ಜಿಲ್ಲಾ ಉಪ ನಿರ್ದೇಶಕರ ಮೂಲಕ ಆಸಕ್ತ ಉಪನ್ಯಾಸಕರನ್ನು ಅನ್ಯಕಾರ್ಯ ನಿಮಿತ್ತದ ಮೇಲೆ ಬಿಡುಗಡೆ ಮಾಡಲು ಸೂಚಿಸಿದೆ.
3. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಸಂಬಂಧಿಸಿದ ಎಲ್ಲಾ ಉಪ ನಿರ್ದೇಶಕರುಗಳ ಕಛೇರಿಯ ವೆಬ್‌ಸೈಟ್‌ಗೆ ಅಳವಡಿಸಲು.